ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಾನ್ ಮೈಕಲ್ ಕುನ್ಹ

ಯಾಕೂಬ್ ಶರೀಫ್ -ವಿರುದ್ಧ ಕರ್ನಾಟಕ ರಾಜ್ಯದ ಪರವಾಗಿ ಚಿಕ್ಕಬಳ್ಳಾಪುರ ಟೌನ್, ಪೊಲೀಸ್ ಸ್ಟೇಷನ್ ಹಾಗೂ ಮತ್ತೊಬ್ಬರು

ಕ್ರಿಮಿನಲ್ ಅರ್ಜಿ ಸಂ. 5866/2013, ದಿನಾಂಕ 16 ನೇ ಏಪ್ರಿಲ್, 2019

ಆಜ್ಞೆ

ನ್ಯಾಯಮೂರ್ತಿ ಶ್ರೀ ಜಾನ್ ಮೈಕಲ್ ಕುನ್ಹ:

ಲಿಖಿತದಲ್ಲಿನ ದೂರನ್ನು ಅಂಚೆ ಮೂಲಕ ಮ್ಯಾಜಿಸ್ಟ್ರೇಟರಿಗೆ ಕಳುಹಿಸಿದಾಗ ಅನುಸರಿಸಬೇಕಾದ ವ್ಯವಹರಣೆಗಳೇನು?ಈ ಅರ್ಜಿಯಲ್ಲಿ ಪರಿಗಣಿಸಲು ಉದ್ಭವಿಸಿರುವಂಥ ಪ್ರಶ್ನೆ ಇದಾಗಿರುತ್ತದೆ.

2. ಈ ಅರ್ಜಿಯಲ್ಲಿ ಒಳಗೊಂಡಿರುವ ವಿವಾದಗಳನ್ನು ಅರ್ಥೈಸಿಕೊಳ್ಳಲು ಅವಶ್ಯಕವಾಗಿರುವ ವಾಸ್ತವಾಂಶಗಳು ಈ ಮುಂದಿನಂತಿರುತ್ತವೆ:

ಪ್ರತ್ಯರ್ಜಿದಾರ ಸಂ .2 ನೋಂದಾಯಿತ ಅಂಚೆ ಮೂಲಕ ಚಿಕ್ಕಬಳ್ಳಾಪುರದ ಮಾನ್ಯ ಜೆಎಂಎಫ್ಸಿ ರವರಿಗೆ ಲಿಖಿತ ದೂರನ್ನು ಸಲ್ಲಿಸಿರುತ್ತಾರೆ.ಇದನ್ನು 22-05-2012 ರಂದು ಮ್ಯಾಜಿಸ್ಟ್ರೇಟರು ಸ್ವೀಕರಿಸಿರುತ್ತಾರೆ.ಮಾನ್ಯ ಮ್ಯಾಜಿಸ್ಟ್ರೇಟರು ಪಿಸಿಆರ್ ಅಂತೆ ಸದರಿ ದೂರನ್ನು ನೋಂದಾಯಿಸಿಕೊಳ್ಳಲು ರಿಜಿಸ್ಟ್ರಿಗೆ ನಿರ್ದೇಶಿಸಿರುತ್ತಾರೆ. 13-07-2012 ರಂದಿನ ತರುವಾಯದ ಆದೇಶದ ಮೂಲಕ ಮಾನ್ಯ ಮ್ಯಾಜಿಸ್ಟ್ರೇಟರ್ ತನಿಖೆಗಾಗಿ ದಂಡ ಪ್ರಕ್ರಿಯಾ ಸಂಹಿತೆಯ 156(3) ನೇ ಪ್ರಕರಣದಡಿಯಲ್ಲಿ ಅಧಿಕಾರವ್ಯಾಪ್ತಿಯಲ್ಲಿರುವ ಪೊಲೀಸರಿಗೆ ದೂರನ್ನು ಉಲ್ಲೇಖಿಸಿರುತ್ತಾರೆ.ಆದೇಶವನ್ನು ಈ ಮುಂದಿನಂತೆ ಓದಲಾಗಿರುತ್ತದೆ:

13-07-2012.

ದೂರುದಾರ ಗೈರು ಹಾಜರಾಗಿರುತ್ತಾನೆ.ದೂರನ್ನು ಮುಂದುವರೆಸಲಾಗಿರುತ್ತದೆ.

ದೂರಿನಲ್ಲಿ ಮಾಡಿರುವ ಆರೋಪಗಳು, ಆಪಾದಿತನು ಭಾರತ ದ ಂ ಡ ಸ ಂ ಹಿತೆಯ 323, 324, 420, 409 ಮುಂತಾದ ಪ್ರಕರಣಗಳಡಿಯಲ್ಲೂ ಅಪರಾಧಗಳನ್ನೂ ಎಸಗಿರುತ್ತಾನೆಂಬುದನ್ನು ಬಹಿರಂಗಪಡಿಸುತ್ತದೆ.

06-10-12 ರೊಳಗೆ ವರದಿಯನ್ನು ನಿರೀಕ್ಷಿಸಬಹುದಾಗಿರುತ್ತದೆ.

ಸಹಿ/-13/7

3. ಅರ್ಜಿದಾರ/ಆಪಾದಿತನ ಪರ ಮಾನ್ಯ ಹಿರಿಯ ನ್ಯಾಯವಾದಿಗಳೂ ದೂರನ್ನು ಸ್ವೀಕರಿಸಿದ ಮೇಲೆ ಮಾನ್ಯ ಮ್ಯಾಜಿಸ್ಟ್ರೇಟರು ಖಾಸಗಿ ದೂರಿನಂತೆ ಪ್ರಕರಣವನ್ನು ನೋಂದಾಯಿಸಿಕೊಳ್ಳಲು ಕಚೇರಿಗೆ ನಿರ್ದೇಶಿಸಿರುತ್ತಾರೆ.ಪ್ರಕರಣವನ್ನು ಒಮ್ಮೆ ಖಾಸಗಿ ದೂರಿನಂತೆ ನೋಂದಣಿ ಮಾಡಿಕೊಂಡರೆ XV ನೇ ಅಧ್ಯಾಯದ ಉಪಬಂಧಗಳನ್ನು ಅನ್ವಯಿಸಬೇಕಾಗುತ್ತದೆ.ಸಂಹಿತೆಯ XV ನೇ ಅಧ್ಯಾಯದ ಮೇರೆಗೆ, ಮ್ಯಾಜಿಸ್ಟ್ರೇಟರು ದೂರಿನ ಮೇಲೆ ಅಪರಾಧವನ್ನು ಸಂಜ್ಞೇಯಕ್ಕೆ ತೆಗೆದುಕೊಳ್ಳಲು ಎರಡು ಅವಕಾಶಗಳಿರುತ್ತವೆ ಅಂದರೆ, (i) ದೂರುದಾರ ಹಾಗೂ ಸಾಕ್ಷ್ಯಧಾರರನ್ನು ತೆಗೆದುಕೊಂಡ ಪ್ರಮಾಣವಚನದ ಮೇಲೆ ಪರೀಕ್ಷಿಸಿ, ದೂರುದಾರ ಹಾಗೂ ಸಾಕ್ಷೀದಾರರ ಪ್ರಮಾಣವಚನದ ಮೇಲೆ ನಿವೇದನೆಗಳನ್ನು ಪರಿಗಣಿಸಿದ ತರುವಾಯ, ಮುಂದುವರೆಯಲು ಯುಕ್ತ ಆಧಾರಗಳಿಲ್ಲದಿದ್ದಲ್ಲಿ ಈತನ ದೂರನ್ನು ವಜಾಗೊಳಿಸತಕ್ಕದ್ದು.ಮ್ಯಾಜಿಸ್ಟ್ರೇಟರಿನ ಅಭಿಪ್ರಾಯದಲ್ಲಿ ಮುಂದುವರೆಯಲು ಯುಕ್ತ ಆಧಾರವಿದ್ದಲ್ಲಿ ಮ್ಯಾಜಿಸ್ಟ್ರೇಟರು ಸಂದರ್ಭಾನುಸಾರ ಆಪಾದಿತನಿಗೆ ಸಮನುಗಳನ್ನಾಗಲೀ ಅಥವಾ ವಾರಂಟನ್ನಾಗಲೀ ನೀಡತಕ್ಕದ್ದಾಗಿರುತ್ತದೆ.(ii) ದಂಡ ಪ್ರಕ್ರಿಯಾ ಸಂಹಿತೆಯ 202 ನೇ ಪ್ರಕರಣದಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ಕಾರ್ಯವಿಧಾನದ ವಿಷಯವನ್ನೇ ಮುಂದೂಡಬಹುದಾಗಿರುತ್ತದೆಂದು ವಾದಿಸಿರುತ್ತಾರೆ.

4. ಪ್ರಸ್ತುತ ಪ್ರಕರಣದಲ್ಲಿ, ಮಾನ್ಯ ಮ್ಯಾಜಿಸ್ಟ್ರೇಟರು ಪ್ರಕರಣದ ನೋಂದಣಿಗೆ ನಿರ್ದೇಶಿಸಿದ ಪರಿಣಾಮವಾಗಿ, ಮ್ಯಾಜಿಸ್ಟ್ರೇಟರು, ಕಾರ್ಯವಿಧಾನದ ವಿಷಯವನ್ನು ಮುಂದೂಡಿರುವುದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 202 ನೇ ಪ್ರಕರಣದ ಬಲದಿಂದ, ಕಾರ್ಯವಿಧಾನದ ವಿಷಯವನ್ನು ಮುಂದೂಡಲು ಮ್ಯಾಜಿಸ್ಟ್ರೇಟರು ನಿರ್ಧರಿಸಿದಾಗ, ಇವರು, ತಮ್ಮ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವಂಥ ಪ್ರದೇಶವನ್ನು ಮೀರಿದ ಸ್ಥಳದಲ್ಲಿ ಆಪಾದಿತರು ವಾಸಿಸುತ್ತಿದ್ದಲ್ಲಿ, ವಿಚಾರಣೆ ನಡೆಸಲು ಅಗತ್ಯಪಡಿಸಬಹುದು ಅಥವಾ ಪೊಲೀಸ್ ಅಧಿಕಾರಿ ಅಥವಾ ಇವರು ಯುಕ್ತವೆಂದು ಭಾವಿಸುವಂಥ ಯಾರೇ ಇತರೆ ವ್ಯಕ್ತಿಯಿಂದ ಮಾಡಿಸಬೇಕಾದ ತನಿಖೆಗೆ ನಿರ್ದೇಶಿಸಬಹುದು.ಆದರೆ ದಂಡ ಪ್ರಕ್ರಿಯಾ ಸಂಹಿತೆಯ 202 ನೇ ಪರಂತುಕವು;

i) ದೂರು ನೀಡಿದ ಅಪರಾಧ ಅದರಲ್ಲೂ ವಿಶೇಷವಾಗಿ ಸೆಷೆನ್ಸ್ ನ್ಯಾಯಾಲಯಗಳು ವಿಚಾರಣೆ ಮಾಡಬಹುದಾದುದೆಂದು ಮ್ಯಾಜಿಸ್ಟ್ರೇಟರಿಗೆ ಕಂಡುಬರುವಲ್ಲಿ; ಅಥವಾ

ii) 200 ನೇ ಪ್ರಕರಣದಡಿ ಪ್ರಮಾಣವಚನ ಪಡೆದ ಮೇಲೆ ಹಾಜರಾದ ದೂರುದಾರ ಹಾಗೂ ಸಾಕ್ಷೀದಾರರನ್ನು (ಯಾರಾದರೂ ಇದ್ದರೆ) ಪರೀಕ್ಷಿಸಿದ ಹೊರತು ನ್ಯಾಯಾಲಯವು ದೂರನ್ನು ನೀಡದ ಹೊರತು ತನಿಖೆಗೆ ಸಂಬಂಧಿಸಿದ ಅಂಥ ಯಾವುದೇ ನಿರ್ದೇಶನವನ್ನು ಆಜ್ಞಾಪಿಸುವುದಿಲ್ಲ.

5. ಅರ್ಜಿದಾರ ಪರ ಮಾನ್ಯ ಹಿರಿಯ ನ್ಯಾಯವಾದಿಗಳ ವಾದವು, ದಂಡ ಪ್ರಕ್ರಿಯಾ ಸಂಹಿತೆಯ 202 ನೇ ಪ್ರಕರಣದಡಿಯಲ್ಲಿ ಪ್ರಮಾಣವಚನ ತೆಗೆದುಕೊಂಡ ಮೇಲೆ ದೂರುದಾರ ಹಾಗೂ ಸಾಕ್ಷೀದಾರರನ್ನು ಪರೀಕ್ಷಿಸದ ಹೊರತು, ಮಾನ್ಯ ಮ್ಯಾಜಿಸ್ಟ್ರೇಟರು, ಪೊಲೀಸರು ತನಿಖೆಯನ್ನು ನಿರ್ದೇಶಿಸಲು ಅಧಿಕಾರವ್ಯಾಪ್ತಿಯನ್ನು ಹೊಂದಿರುವುದಿಲ್ಲ.ಆದ್ದರಿಂದ ಅಧಿಕಾರವ್ಯಾಪ್ತಿಯ ಪೊಲೀಸರು ತನಿಖೆಗೆ ಸಂಬಂಧಿಸಿದಂತೆ ದೂರನ್ನು ಉಲ್ಲೇಖಿಸುವ ಮಾನ್ಯ ಮ್ಯಾಜಿಸ್ಟ್ರೇಟರು ಹೊರಡಿಸಿದ 13.07.2012 ರಂದಿನ ಪ್ರಶ್ನಿತ ಆದೇಶವು, ದಂಡ ಪ್ರಕ್ರಿಯಾ ಸಂಹಿತೆಯ 202 ನೇ ಪ್ರಕರಣಗಳ ಆಜ್ಞಾಪಕ ಉಪಬಂಧಗಳ ಉಲ್ಲಂಘನೆಯಾಗಿರುತ್ತದೆ.ಅದರಿಂದಾಗಿ, ಪ್ರಶ್ನಿತ ನಿರ್ದೇಶನ ಹಾಗೂ ಪ್ರತ್ಯರ್ಜಿದಾರ ಸಂ .1 ಪೊಲೀಸರು ಕೈಗೊಂಡ ತತ್ಪರಿಣಾಮದ ತನಿಖೆಯ ಕಾನೂನಿನ ದೃಷ್ಟಿಯಿಂದ ದೋಷಪೂರ್ಣವಾಗಿದ್ದು, ಅಧಿ ಕಾರವ್ಯಾಪ್ತಿಯನ್ನು ಹೊಂದಿಲ್ಲದಿರುವುದರಿಂದ ವಜಾಗೊಳಿಸಲು ತಕ್ಕದಾಗಿರುತ್ತದೆಂದು ಒತ್ತಾಯಿಸಿರುತ್ತದೆ.

6. ಅರ್ಜಿದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಗಳ ಪ್ರತ್ಯರ್ಜಿದಾರ ಸಂ .1 ಸರ್ಕಾರ ಪರ ಹಾಜರಾದ ಮಾನ್ಯ ಎಸ್ಪಿಪಿ-II ರವರು ಗಂಭೀರವಾಗಿ ವಿರೋಧಿಸಿರುತ್ತಾರೆ.18 ನೇ ಪ್ಯಾರಾದ ಉಲ್ಲೇಖದೊಂದಿಗೆ ಮಾಧೋ ಹಾಗೂ ಮತ್ತೊಬ್ಬರು ವಿರುದ್ದ-ಮಹಾರಾಷ್ಟ್ರ ಸರ್ಕಾರ ಹಾಗೂ ಮತ್ತೊಬ್ಬರು 1 ' ಪ್ರಕರಣದಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಿ, ಮ್ಯಾಜಿಸ್ಟ್ರೇಟರು ಚ ದೂರನ್ನು ಸ್ವೀಕರಿಸಿದಾಗ, ಆತ ದೂರಿನಲ್ಲಿ ಆಪಾದಿಸಿರುವ ವಾಸ್ತವಾಂಶಗಳು ಅಪರಾಧ ಎಸಗಿರುವುದನ್ನು ಬಹಿರಂಗಪಡಿಸಿ ಪ್ರತಿಯೊಂದು ಪ್ರಕರಣವನ್ನು ಸಂಜ್ಞೆಯಕ್ಕೆ ತೆಗೆದುಕೊಳ್ಳಲು ಬದ್ಧನಾಗಿರುವುದಿಲ್ಲ.ಮ್ಯಾಜಿಸ್ಟ್ರೇಟರಿಗೆ ಈ ವಿಷಯದಲ್ಲಿ ಸಾಕಷ್ಟು ವಿವೇಚನಾಧಿಕಾರವಿರುತ್ತದೆ.ದೂರನ್ನು ಓದಿದ ಮೇಲೆ, ಆತನಿಗೆ ಅದರಲ್ಲಿನ ಆಪಾದನೆಗಳು ಸಂಜ್ಞೆಯಕ್ಕೆ ತೆಗೆದುಕೊಳ್ಳಬಹುದಾದ ಅಪರಾಧಗಳೆಂದು 156 (3) ಪ್ರಕರಣದಡಿಯಲ್ಲಿ ತನಿಖೆಗಾಗಿ ಪೊಲೀಸರಿಗೆ ದೂರನ್ನು ಕಳುಹಿಸುವುದು ನ್ಯಾಯದಾನಕ್ಕೆ ಅನುಕೂಲಕರವಾಗಿರುತ್ತದೆಂದು ಕಂಡುಬಂದಲ್ಲಿ, ಪೊಲೀಸರ ಪ್ರಾಥಮಿಕ ಕರ್ತವ್ಯವಾಗಿರುವಂಥ ತನಿಖೆಯನ್ನು ಮಾನ್ಯ ಮ್ಯಾಜಿಸ್ಟ್ರೇಟರೇ ವಿಚಾರಣೆ ಮಾಡುವ ಮೂಲಕ ಅಮೂಲ್ಯವಾದ ಸಮಯ ವ್ಯರ್ಥಮಾಡುವುದನ್ನು ತಪ್ಪಿಸಬಹುದಾಗಿದ್ದು, ಸ್ವತಃ ಅಪರಾಧವನ್ನು ಸಂಜ್ಞೆಯತೆಗೆ ತೆಗೆದುಕೊಳ್ಳುವಂಥ ಕ್ರಮವನ್ನು ಅಳವಡಿಸಿಕೊಳ್ಳುವಲ್ಲಿ ಆತನೇ ಸಮರ್ಥನೀಯವಾಗಿರುತ್ತಾನೆ.ಆದಾಗ್ಯೂ, 156 ( 3) ನೇ ಪ್ರಕರಣದಡಿಯಲ್ಲಿನ ಅಧಿಕಾರವನ್ನು 190 ( 1) ( ಎ) ಪ್ರಕರಣದಡಿಯಲ್ಲಿನ ಅಪರಾಧವನ್ನು ಈತ ಸಂಜ್ಞೆಯಕ್ಕೆ ತೆಗೆದುಕೊಳ್ಳುವ ಮೊದಲು ಮ್ಯಾಜಿಸ್ಟ್ರೇಟರು ಅನ್ವಯಿಸಬಹುದಾಗಿರುತ್ತದಾದರೂ, ಒಮ್ಮೆ ಈತ ಅಂಥ ಸಂಜ್ಞೆಯವನ್ನು ತೆಗೆದುಕೊಂಡಲ್ಲಿ ಹಾಗೂ XV ನೇ ಅಧ್ಯಾಯದಲ್ಲಿ ಉದ್ದೇಶಿಸಲಾದ ಕಾರ್ಯವಿಧಾನಗಳನ್ನು ಆರಂಭಿಸಿದಲ್ಲಿ, ಈತ ಸಂಜ್ಞೆಯ ಪೂರ್ವಸ್ಥಿತಿಗೆ ತರಲು ಹಾಗೂ ದಂಡ ಪ್ರಕ್ರಿಯಾ ಸಂಹಿತೆಯ 156 ( 3) ಪ್ರಕರಣದ ಲಭ್ಯತೆಗೆ ಸಕ್ಷಮವಾಗಿರುವುದು.

7. ದಂಡ ಪ್ರಕ್ರಿಯಾ ಸಂಹಿತೆಯ 156 (3) ನೇ ಪ್ರಕರಣದಡಿಯಲ್ಲಿ ತನಿಖೆಯನ್ನು ನಿರ್ದೇಶಿಸಲು ಮಾನ್ಯ ಮ್ಯಾಜಿಸ್ಟ್ರೇಟರನಿಗಿರುವ ಅಧಿಕಾರಕ್ಕೆ ಸಂಬಂಧ ಪಡುವಷ್ಟರ ಮಟ್ಟಿಗೆ, ಮಾನ್ಯ ಮ್ಯಾಜಿಸ್ಟ್ರೇಟರು ಮೊನಾ ಪನ್ವಾರ್ ವಿರುದ್ಧ ಅಲಹಾಬಾದ್ ನ್ಯಾಯಸ್ಥಾನದ ಉಚ್ಚ ನ್ಯಾಯಾಲಯವು ತನ್ನ ರಿಜಿಸ್ಟ್ರಾರ್‌ಗಳು ಹಾಗೂ

ಇತರರಿಂದ 2 ಪ್ರತಿನಿಧಿಸಿರುವಂಥ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪನ್ನು ಉಲ್ಲೇಖಿಸಿರುತ್ತಾನೆ.

8. ಮುಂದುವರೆದು, ಎಸ್.ಆರ್. ಸುಕುಮಾರ್ ವಿರುದ್ಧ ~ ಎಸ್. ಸುನಾದ್ ರಘುರಾಮ್ 3, ಪ್ರಕರಣದಲ್ಲಿ ತೀರ್ಪು ಹಾಗೂ ಸರ್ಕಾರ -ವಿರುದ್ಧ-ರಾಜೇಂದ್ರ ಲಾಲ್, ವ್ಯವಸ್ಥಾಪಕರು, ಉಪ್ಪರ್ ದೋವಾಬ್ ಸಕ್ಕರೆ ಕಾರ್ಖಾನೆ* ಪ್ರಕರಣದಲ್ಲಿ ಅಲಹಾಬಾದ್ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪನ್ನು ಉದಾಹರಿಸಿ, ಮಾನ್ಯ ಎಸ್ಪಿಪಿ -2 ರವರು ರವರು,, ದೂರನ್ನು ವ್ಯಕ್ತಿಯೇ ಖುದ್ದಾಗಿ ಹಾಜರುಪಡಿಸುವಂತಿರುವುದಿಲ್ಲ; ಕ್ರಿಮಿನಲ್ ಅಪರಾಧಗಳನ್ನು ರೂಪಿಸಿರುವ ವಾಸ್ತವಾಂಶಗಳನ್ನು ಬಹಿರಂಗಪಡಿಸಿ ಹಾಗೂ ಕ್ರಮ ತೆಗೆದುಕೊಳ್ಳಲು ಅವರನ್ನು ಕೋರಿ ಮ್ಯಾಜಿಸ್ಟ್ರೇಟರಿಗೆ ಪತ್ರವನ್ನು ಬರೆದಿದ್ದರೂ ಕೂಡ ಅದನ್ನು ಸಿಂಧುವಾದ ಹಾಗೂ ಯುಕ್ತವಾದ ದೂರೆಂದೇ ಪರಿಗಣಿಸಬೇಕಾಗಿರುತ್ತದೆ.

9. ನಾನು ಮೇಲೆ ಉಲ್ಲೇಖಿಸಿದ ನಿರ್ಣಯಗಳಲ್ಲಿ ಸರ್ವೋಚ್ಚ ಚ ನ್ಯಾಯಾಲಯದಿಂದ ನಿರೂಪಿತವಾದ ಕಾರ್ಯವಿಧಾನದ ಉಲ್ಲೇಖದೊಂದಿಗೆ ವಕೀಲರ ಪರಿಷತ್ತಿನ ಕಡೆಯಿಂದ ಮಂಡಿಸಿದ ನಿವೇದನೆಗಳನ್ನು ಎಚ್ಚರಿಕೆಯಿಂದ ಆಲಿಸಿರುವ ನಾನು ಆ ಮಂಡನೆಗಳಿಗೆ ಉಪಕೃತನಾಗಿರುತ್ತೇನೆ.

10. ಮಾಧೋ ಹಾಗೂ ಮತ್ತೊಬ್ಬರು -ವಿರುದ್ಧ-ಮಹಾರಾಷ್ಟ್ರ ರಾಜ್ಯ ಹಾಗೂ ಇತರರು (ಮೇಲೆ ಹೇಳಿದಂತೆ) ಪ್ರಕರಣದಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ವಿವರಿಸಿರುತ್ತದೆ.

*18. ಮ್ಯಾಜಿಸ್ಟ್ರೇಟರನು ದೂರನ್ನು ಸ್ವೀಕರಿಸಿದಾಗ, ದೂರಿನಲ್ಲಿರುವ ಆಪಾದಿತ ವಾಸ್ತವಾಂಶಗಳು ಅಪರಾಧ ಎಸಗಿರುವುದನ್ನು ಬಹಿರಂಗಪಡಿಸಿದಲ್ಲಿ ಅವನ್ನು ಸಂಕ್ಷೇಯಕ್ಕೆ ತೆಗೆದುಕೊಳ್ಳಲು ಬದ್ಧನಾಗಿರುವುದಿಲ್ಲ.ಮ್ಯಾಜಿಸ್ಟ್ರೇಟರನಿಗೆ ವಿಷಯದಲ್ಲಿ ವಿವೇಚನಾಧಿಕಾರವಿರುತ್ತದೆ.ದೂರನ್ನು ಓದಿದ ಮೇಲೆ ಅದರಲ್ಲಿನ ಆಪಾದನೆಗಳು ಸಂಜ್ಞೆಯ ಅಪರಾಧಗಳನ್ನು ಬಹಿರಂಗಪಡಿಸಿದಲ್ಲಿ ಹಾಗೂ 156 ( 3) ನೇ ಪ್ರಕರಣದಡಿಯಲ್ಲಿನ ತನಿಖೆಗೆ ಸಂಬಂಧಿಸಿದಂತೆ ಪೊಲೀಸರಿಗೆ ದೂರನ್ನು ಕಳುಹಿಸುವುದು ನ್ಯಾಯದಾನಕ್ಕೆ ಅನುಕೂಲಕರವಾಗಿರುತ್ತದೆಂದು, ಪೊಲೀಸರ ಪ್ರಾಥಮಿಕ ಕರ್ತವ್ಯವಾಗಿರುವಂಥ ತನಿಖೆಯನ್ನು ಮಾನ್ಯ ಮ್ಯಾಜಿಸ್ಟ್ರೇಟ ಟರೇ ವಿಚಾರಣೆ ಮಾಡುವ ಮೂಲಕ ಅವರ ಅಮೂಲ್ಯವಾದ ಸಮಯ ವ್ಯರ್ಥಮಾಡುವುದನ್ನು ತಪ್ಪಿಸಲು ಸ್ವತಃ ಅಪರಾಧವನ್ನು ಸಂಜೇಯತೆಗೆ ತೆಗೆದುಕೊಳ್ಳುವಂಥ ಕ್ರಮವನ್ನು ಅಳವಡಿಸಿಕೊಳ್ಳುವಲ್ಲಿ ಆರನೇ ಸಮರ್ಥನೀಯವಾಗಿರುತ್ತಾನೆ.ಈ ಹಿಂದೆ ಹೇಳಿದಂತೆ, ಸಂಜ್ಞೆಯ ಅಪರಾಧ ಎಸಗಿರುವುದಕ್ಕೆ ಸಂಬಂಧಿಸಿದಂತೆ ನೀಡಿರುವ ದೂರಿನ ಸಂದರ್ಭದಲ್ಲಿ 156 (3) ನೇ ಪ್ರಕರಣದಡಿಯಲ್ಲಿನ ಅಧಿಕಾರವನ್ನು 190 ( 1) (ಎ) ಪ್ರಕರಣದಡಿಯಲ್ಲಿ ಅಪರಾಧವನ್ನು ಸಂಜ್ಞೆಯಕ್ಕೆ ತೆಗೆದುಕೊಳ್ಳುವ ಮೊದಲು ಮ್ಯಾಜಿಸ್ಟ್ರೇಟರು ಅನ್ವಯಿಸಿರುತ್ತಾರೆ.ಆದಾಗ್ಯೂ, ಒಮ್ಮೆ ಈತ ಅಂಥ ಸಂಜ್ಞೆಯತೆಯನ್ನು ತೆಗೆದುಕೊಂಡಲ್ಲಿ ಹಾಗೂ XV ನೇ ಅಧ್ಯಾಯದಲ್ಲಿ ಉದ್ದೇಶಿಸಲಾದ ಕಾರ್ಯವಿಧಾನಗಳನ್ನು ಆರಂಭಿಸಿದಲ್ಲಿ ಈತ ಸಂಜ್ಞೆಯತೆಯನ್ನು ಪೂರ್ವಸ್ಥಿತಿಗೆ ತರಲು ಹಾಗೂ ದಂಡ ಪ್ರಕ್ರಿಯಾ ಸಂಹಿತೆಯ 156(3)ನೇ ಪ್ರಕರಣದ ಲಭ್ಯತೆಗೆ ಸಕ್ಷಮವಾಗಿರುವುದಿಲ್ಲ.

19. ಮ್ಯಾಜಿಸ್ಟ್ರೇಟರನು ಸಂಜ್ಞೆಯಕ್ಕೆ ತೆಗೆದುಕೊಳ್ಳುವುದನ್ನು ಆಯ್ಕೆ ಮಾಡಿಕೊಂಡಿರುವಲ್ಲಿ, ಈತ ಈ ಮುಂದಿನ ಯಾವುದೇ ಪರಾಯಗಳನ್ನು ಅನ್ವಯಿಸಿಕೊಳ್ಳಬಹುದಾಗಿರುತ್ತದೆ.

(ಎ) ಈತ ದೂರನ್ನು ಮುಂದುವರೆಸಬಹುದು ಹಾಗೂ ಕಾರ್ಯವಿಧಾನಕ್ಕೆ ಯುಕ್ತಕಾರಣಗಳಿವೆಯೆಂದು ಈತನಿಗೆ ಮನವರಿಕೆಯಾದಲ್ಲಿ, ಈತ ಆಪಾದಿತನ ಮೇಲೆ ನೇರವಾಗಿ ಕ್ರಮ ತೆಗೆದುಕೊಳ್ಳಬಹುದಾಗಿದ್ದರೂ, ಹಾಗೆ ಮಾಡುವ ಮೊದಲು 200 ನೇ ಪ್ರಕರಣದ ಅಗತ್ಯತೆಗಳನ್ನು ಈತ ಪಾಲಿಸಲೇ ಬೇಕಾಗಿರುತ್ತದೆ ಹಾಗೂ ಫಿರ್ಯಾದುದಾರ ಅಥವಾ ಆತನ ಸಾಕ್ಷೀದಾರನ ಸಾಕ್ಷ್ಯವನ್ನು ದಾಖಲಿಸಿಕೊಳ್ಳಬೇಕಾಗಿರುತ್ತದೆ.

(ಬಿ) ಮ್ಯಾಜಿಸ್ಟ್ರೇಟರನು ಕ್ರಮ ತೆಗೆದುಕೊಳ್ಳುವುದನ್ನು ಮುಂದೂಡಿ, ಸ್ವತಃ ವಿಚಾರಣೆಗೆ ನಿರ್ದೇಶಿಸಬಹುದಾಗಿರುತ್ತದೆ.

ಮ್ಯಾಜಿಸ್ಟ್ರೇಟರನು ಕ್ರಮ ತೆಗೆದುಕೊಳ್ಳುವುದನ್ನು ಮುಂದೂಡಿ, ಯಾರೇ ಇತರೆ ವ್ಯಕ್ತಿಯಿಂದ ವಿಚಾರಣೆಗೆ ಅಥವಾ ಪೊಲೀಸರಿಂದ ತನಿಖೆಗೆ ನಿರ್ದೇಶಿಸಬಹುದಾಗಿರುತ್ತದೆ.

11. ಮೊನಾ ಪನ್ವಾರ್ -ವಿರುದ್ಧ-ಅಲಹಾಬಾದ್ ಉಚ್ಚ ನ್ಯಾಯಾಲಯ (ಮೇಅನಂತೆ) ಪ್ರಕರಣದಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿರುತ್ತದೆ:

"20. ಸಂಜ್ಞೆಯಕ್ಕೆ ತೆಗೆದುಕೊಳ್ಳುವುದು ಕಾರ್ಯವಿಧಾನವನ್ನು ಆರಂಭಿಸುವುದಕ್ಕಿಂತ ಭಿನ್ನವಾದುದಾಗಿರುತ್ತದೆ.ಸಂಹಿತೆಯ 200 ನೇ ಪ್ರಕರಣದಲ್ಲಿ ನಮೂದಿಸಿದ ದೂರುದಾರ ಹಾಗೂ ಈತನ ಸಾಕ್ಷೀದಾರನನ್ನು ಪರೀಕ್ಷಿಸುವ ಉದ್ದೇಶಗಳಲ್ಲಿ ಒಂದೆಂದರೆ, ಫಿರ್ಯಾದಿನಲ್ಲಿನ ಅಪರಾಧದ ಆಪಾದಿತ ವ್ಯಕ್ತಿಯ ವಿರುದ್ಧ ಮೊದಲ ನೋಟಕ್ಕೆ ಖಚಿತಪಡಿಸಿರುವುದಾಗಿರುತ್ತದೆ ಹಾಗೂ ಇದು ಸುಳ್ಳು ಅಥವಾ ಪ್ರಚೋದಕ ಅಥವಾ ಅಂಥ ವ್ಯಕ್ತಿಗೆ ಕಿರುಕುಳ ನೀಡುವ ಒಂದೇ ಉದ್ದೇಶವನ್ನು ಹೊಂದಿರುವಂಥ ದೂರಿನ ಮೇಲೆ ಕ್ರಮಕ್ಕೈಗೊಳ್ಳುವುದನ್ನು ತಪ್ಪಿಸುವುದಗಿರುತ್ತದೆ.

21. ........

22. ..........

23. ಸಾಮಾನ್ಯವಾಗಿ, ದೂರುದಾರ ಹಾಗೂ ಈತನ ಸಾಕ್ಷೀದಾರನ ಪರೀಕ್ಷೆಗಾಗಿ ಸಂಹಿತೆಯ 200 ನೇ ಪ್ರಕರಣದಡಿಯಲ್ಲಿನ ಆದೇಶವನ್ನು ಹೊರಡಿಸಲಾಗುವುದಿಲ್ಲ ಏಕೆಂದರೆ, ತನಿಖೆ ಮಾಡುವುದು ಪೊಲೀಸರ ಪ್ರಾಥಮಿಕ ಕರ್ತವ್ಯವಾಗಿದ್ದು, ಇಂಥ ವಿಷಯಗಳಲ್ಲಿ ವಿಚಾರಣೆ ಮಾಡಲು ನಿಹಿತವಾಗುವುದರಿಂದ ಮ್ಯಾಜಿಸ್ಟ್ರೇಟರ ಮೌಲ್ಯಯುತ ಸಮಯ ವ್ಯರ್ಥವಾಗುತ್ತದೆ.ಆದಾಗ್ಯೂ, ಸಂಹಿತೆಯ 200 ನೇ ಪ್ರಕರಣದಡಿಯಲ್ಲಿ ದೂರುದಾರ ಹಾಗೂ ಆತನ ಸಾಕ್ಷೀದಾರರನ್ನು ಆ ಪ್ರಕರಣವು ಗಂಭೀರಸ್ವರೂಪದೆಂದು ಮ್ಯಾಜಿಸ್ಟ್ರೇಟರ್ ಮನಗಂಡಾಗ ವಿಚಾರಣೆ ಮಾಡಲು ನಿರ್ದೇಶಿಸುವುದು ಹಲವಾರು ವರ್ಷಗಳಿಂದ ರೂಢಿಸಿಕೊಂಡು ಬಂದಿರುವ ವಿಚಾರವಾಗಿರುತ್ತಾದರೂ ಎಲ್ಲಾ ವಿಷಯಗಳಲ್ಲ.ದೂರನ್ನು ಓದಿದ ಮೇಲೆ ಮ್ಯಾಜಿಸ್ಟ್ರೇಟರ್ನು, ಅದರಲ್ಲಿನ ಆಪಾದನೆಗಳ ಸಂಹಿತೆಯ 156 ( 3) ಪ್ರಕರಣದಡಿಯಲ್ಲಿ ತನಿಖೆಗಾಗಿ ಪೊಲೀಸರಿಗೆ ದೂರನ್ನು ನೀಡುವಲ್ಲಿ ನ್ಯಾಯದಾನಕ್ಕೆ ತನಿಖೆಗಾಗಿ ಪೊಲೀಸರಿಗೆ ದೂರನ್ನು ನೀಡುವಲ್ಲಿ ನ್ಯಾಯದಾನಕ್ಕೆ ಅನುಕೂಲಕಲ್ಪಿಸದಿದ್ದಲ್ಲಿ ಈತ, ಸ ಂ ಹಿತೆಯ 200 ನೇ ಪ್ರಕರಣದಲ್ಲಿ ಸಲಹೆ ನೀಡಿದ ಕ್ರಮವನ್ನು ಅಳವಡಿಸಿಕೊಳ್ಳುವಲ್ಲಿ ಸಮರ್ಥನೀಯವಾಗಿರುತ್ತಾನೆ. "

12. ಹಾಗಾಗಿ, ಸಂಹಿತೆಯ ಯೋಜನೆಯಿಂದ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿವರಿಸಿದ ಕಾನೂನಿಂದ, ಅಧ್ಯಾಯ XV ರಲ್ಲಿ ಮ್ಯಾಜಿಸ್ಟ್ರೇಟರಿಗೆ ದೂರನ್ನು ಸಲ್ಲಿಸಿದಾಗ, ಮ್ಯಾಜಿಸ್ಟ್ರೇಟರನಿಗೆ ಮುಖ್ಯವಾಗಿ ಎರಡು ಆಯ್ಕೆಗಳು ಲಭ್ಯವಾಗಿರುತ್ತವೆ:

ಎ) ಸಂಜ್ಞೆಯಕ್ಕೆ ತೆಗೆದುಕೊಳ್ಳುವ ಮೊದಲು ಸಂಹಿತೆಯ 156 ( 3) ನೇ ಪ್ರಕರಣದಡಿಯಲ್ಲಿ ಉದ್ದೇಶಿಸಲಾದಂಥ ಆದೇಶವನ್ನು ಹೊರಡಿಸುವುದು;

ಬಿ) ಸಂಜ್ಞೆಯಕ್ಕೆ ತೆಗೆದುಕೊಳ್ಳುವುದನ್ನು ನಿರ್ಧರಿಸಿದಲ್ಲಿ, ಈ ಮುಂದಿನ ಯಾವುದೇ ಕ್ರಮಗಳನ್ನು ಅಳವಡಿಸಿಕೊಳಲ್ಲು, ಎ0ದರೆ,

i) ಪ್ರಮಾಣವಚನದ ಮೇಲೆ ಫಿರ್ಯಾದುದಾರ ಹಾಗೂ ಈತನ ಸಾಕ್ಷೀದಾರನನ್ನು ಪರೀಕ್ಷಿಸಲು ನಿರ್ದೇಶಿಸುವುದು ಹಾಗೂ ಅಪರಾಧ ಎಸಗಿದ ಆಪಾದನೆಗಳು ಬಹಿರಂಗಗೊಂಡಲ್ಲಿ, ಆಪಾದಿತನ ಮೇಲೆ ಕ್ರಮ ತೆಗೆದುಕೊಳ್ಳುವುದು; ಹಾಗಾಗದಿದ್ದಲ್ಲಿ, ದೂರನ್ನು ವಜಾಗೊಳಿಸುವುದು;

ii) ಕ್ರಮ ತೆಗೆದುಕೊಳ್ಳುವುದನ್ನು ಮುಂದೂಡುವುದು ಹಾಗೂ ಸ್ವತಃ ಪ್ರಕರಣವನ್ನು ವಿಚಾರಣೆ ಮಾಡುವುದು ಅಥವಾ ಪೊಲೀಸ್ ಅಧಿಕಾರಿಯಿಂದ ಅಥವಾ ತಾನು ಯುಕ್ತವೆಂದು ಭಾವಿಸಬಹುದಾದ ಂ ಥ ಯಾರೇ ವ್ಯಕ್ತಿಯಿಂದ ತನಿಖೆನಡೆಸಲು ನಿರ್ದೇಶಿಸುವುದು;

13. ಆದರೆ ಸಂಹಿತೆಯ 202 ನೇ ಪ್ರಕರಣದ ಪರಂತುಕವು ತನಿಖೆಗೆ ಸಂಬಂಧಿಸಿದಂತೆ ಅಂಥ ಯಾವುದೇ ನಿರ್ದೇಶನವನ್ನು

(ಎ) ದೂರು ನೀಡಿರುವ ಅಪರಾಧವನ್ನು ವಿಶೇಷ ಸೆಷೆನ್ಸ್ ನ್ಯಾಯಾಲಯಗಳ ಮೂಲಕ ಅಧಿ ವಿಚಾರಿಸಬಹುದೆಂದು ಮ್ಯಾಜಿಸ್ಟ್ರೇಟರನಿಗೆ ಕಂಡುಬಂದರೆ; ಅಥವಾ

(ಬಿ) ಹಾಜರಾದ ದೂರುದಾರ ಹಾಗೂ ಸಾಕ್ಷಿದಾರರನ್ನು 200 ನೇ ಪ್ರಕರಣದಡಿಯಲ್ಲಿ ಪ್ರಮಾಣವಚನದ ಮೇಲೆ ಪರೀಕ್ಷಿಸದ ಹೊರತು ದೂರ ನು ನ್ಯಾಯಾಲಯವು ನೀಡದಿದ್ದಲ್ಲಿ; ರೂಪಿಸತಕ್ಕದ್ದಲ್ಲವೆಂಬುದನ್ನು ಗೊತ್ತುಪಡಿಸುತ್ತದೆ.

14. ಈ ಪರಂತುಕದ ಬಲದಿಂದ, ಮ್ಯಾಜಿಸ್ಟ್ರೇಟರ ಅಧಿಕಾರವು,

ಎ) ದೂರು ನೀಡುವ ಅಪರಾಧವನ್ನು ಸೆಷೆನ್ಸ್ ನ್ಯಾಯಾಲಯವು ಅಧಿವಿಚಾರಿಸಬಹುದಾದಲ್ಲಿ;

ಪೊಲೀಸರಿಂದ ಅಥವಾ ಕಾಲಪರಿಮಿತಿ ಅಥವಾ ಪೂರ್ವಷರತ್ತಿಗೆ ಒಳಪಡುವ ಅಂಥ ಇತರೆ ವ್ಯಕ್ತಿಯಿಂದ ತನಿಖೆಗೆ ನಿರ್ದೇಶಿಸುವುದಾಗಿರುತ್ತದೆ; ಅಥವಾ

ಬಿ) ದೂರನ್ನು ನ್ಯಾಯಾಲಯ ನೀಡದಿರುವೆಡೆಯಲ್ಲಿ, ಮ್ಯಾಜಿಸ್ಟ್ರೇಟರು, ಹಾಜರಾದ ದೂರುದಾರ ಹಾಗೂ ಸಾಕ್ಷೀದಾರರನ್ನು (ಯಾರಾದರು ಇದ್ದರೆ) ಪ್ರಮಾಣವಚನದ ಮೇಲೆ ಪರೀಕ್ಷಿಸದ ಹೊರತು ತನಿಖೆಗೆ ನಿರ್ದೇಶಿಸುವಂತಿರುವುದಿಲ್ಲ.

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಖಾಸಗಿ ವ್ಯಕ್ತಿಯ ದೂರನ್ನು ನೀಡಿದ್ದಲ್ಲಿ ಹಾಗೂ ಮ್ಯಾಜಿಸ್ಟ್ರೇಟರನು ಪೊಲೀಸರಿಗೆ ತನಿಖೆಗೆ ದೂರನ್ನು ಕಳುಹಿಸಲು ನಿರ್ಧರಿಸಿದಲ್ಲಿ, ಈ ಪರಂತುಕದ ಬಲದಿಂದ, ದಂಡ ಪ್ರಕ್ರಿಯಾ ಸಂಹಿತೆಯ 200 ನೇ ಪ್ರಕರಣದಡಿಯಲ್ಲಿ ಅಗತ್ಯಪಡಿಸಿದಂತೆ ಪ್ರಮಾಣವಚನದ ಮೇಲೆ ದೂರುದಾರ ಹಾಗೂ ಸಾಕ್ಷೀದಾರನನ್ನು ಮೊದಲು ಪರೀಕ್ಷಿಸದೆ ಪೊಲೀಸರು ತನಿಖೆಯನ್ನು ನಿರ್ದೇಶಿಸುವಂತಿರುವುದಿಲ್ಲ.

15. ನಿರಾಕರಿಸಲಾಗದಂತೆ, ಪ್ರಸ್ತುತ ಪ್ರಕರಣದಲ್ಲಿ, ದೂರು ನೀಡಿರುವ ಅಪರಾಧಗಳು ವಿಶೇಷವಾಗಿ ಸೆಷೆನ್ಸ್ ನ್ಯಾಯಾಲಯಗಳಲ್ಲಿ ವಿಚಾರಣೆ ನಡೆಸುವಂತವಾಗಿರುವುದಿಲ್ಲ.ದೂರನ್ನು ಯಾವುದೇ ಕ್ರಿಮಿನಲ್ ನ್ಯಾಯಾಲಯದಿಂದ ಮ್ಯಾಜಿಸ್ಟ್ರೇಟರಿಗೆ ಸಲ್ಲಿಸಿರುವುದಿಲ್ಲ.ಸದರಿ ಸಂದರ್ಭಗಳಡಿಯಲ್ಲೂ, ಪರಂತುಕದ ಉಪ-ಪ್ರಕರಣ (ಬಿ) ಯ ಬಲದಿಂದ, ಮಾನ್ಯ ಮ್ಯಾಜಿಸ್ಟ್ರೇಟರು ಸಂಹಿತೆಯ 200 ನೇ ಪ್ರಕರಣದಡಿಯಲ್ಲಿ ಅಗತ್ಯಪಡಿಸಿದಂತೆ ಪ್ರಮಾಣವಚನದ ಮೇಲೆ ದೂರುದಾರ ಹಾಗೂ ಸಾಕ್ಷೀದಾರನನ್ನು ವಿಚಾರಣೆ ಮಾಡದೆ ಪೊಲೀಸರು ತನಿಖೆ ನಡೆಸುವಂತೆ ನಿರ್ದೇಶಿಸಲಾಗುವುದಿಲ್ಲ.

16. XV ನೇ ಅಧ್ಯಾಯದಲ್ಲಿ ಒಳಗೊಂಡಿರುವ 202 ನೇ ಪ್ರಕರಣದಲ್ಲಿ ಒಳಗೊಂಡಿರುವ "ತನಿಖೆ'ಯ ಸಂಹಿತೆಯ 156ನೇ ಪ್ರಕರಣದಡಿಯಲ್ಲಿ ಉದ್ದೇಶಿಸಲಾದ ತನಿಖೆಯಿಂದ ಭಿನ್ನವಾದುದಾಗಿರುತ್ತದೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕಾಗಿರುತ್ತದೆ.ಸಂಹಿತೆಯ XII ನೇ ಅಧ್ಯಾಯದ 156 ನೇ ಪ್ರಕರಣದಲ್ಲಿ ಕಂಡುಕೊಂಡ ಅಂಶವು ಪೊಲೀಸರು ಹಾಗೂ ತನಿಖೆ ಮಾಡಲು ಅವರಿಗಿರುವ ಅಧಿಕಾರಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡುತ್ತಿದ್ದು, ಇದು ಸಂಹಿತೆಯ 173 ನೇ ಪ್ರಕರಣದಡಿಯಲ್ಲಿ ಅಂತಿಮ ವರದಿ ಸಲ್ಲಿಸುವಲ್ಲಿ ನಿರ್ಣಾಯಕ ಹಂತ ತಲುಪಿ, ಆ ಮೂಲಕ, XV ಅಧ್ಯಾಯವು ಮ್ಯಾಜಿಸ್ಟ್ರೇಟರಿಗೆ ಮಾಡಿದ ದೂರುಗಳನ್ನು ಕುರಿತಂತೆ ವ್ಯವಹರಿಸುತ್ತದೆ.ಆದ್ದರಿಂದ ಈ ಉಪಬಂಧಗಳು ಬೇರೆಬೇರೆ ಪರಿಗಳಲ್ಲಿ ಕಾರ್ಯನಿರ್ವಹಿಸುತ್ತವೆ.ವಿಷಯದಲ್ಲಿ ಮುಂದುವರೆಯಲು ಆತನಿಗೆ ಯುಕ್ತ ಆಧಾರಗಳು ಲಭ್ಯವಾಗಿವೆ ಅಥವಾ ಲಭ್ಯವಾಗಿಲ್ಲ ಎಂಬುದನ್ನು ನಿರ್ಧರಿಸಲು ಮಾತ್ರ ಆತನಿಗೆ ಸೌಲಭ್ಯಕಲ್ಪಿಸಲು ಸಂಹಿತೆಯ XV ಅಧ್ಯಾಯದಡಿಯಲ್ಲಿ ಮಾನ್ಯ ಮ್ಯಾಜಿಸ್ಟ್ರೇಟರು ತನಿಖೆಗೆ ನಿರ್ದೇಶಿಸುತ್ತಾನೆ.ಆದ್ದರಿಂದ, ವಿಷಯವನ್ನು ಮುಂದುವರೆಸುವುದಕ್ಕೆ ಮೊದಲು ಯಾವುದೇ ಅಂಥ ನೆರವನ್ನು ಅಗತ್ಯಪಡಿಸಬೇಕೆಂದು ಮ್ಯಾಜಿಸ್ಟ್ರೇಟರನು ಅಭಿಪ್ರಾಯಪಟ್ಟಲ್ಲಿ ಆತನು ಅಪರಾಧಗಳನ್ನು ಸಂಜ್ಞೆಯಕ್ಕೆ ತೆಗೆದುಕೊಳ್ಳುವ ಮೊದಲು ಸಂಬಂಧಪಟ್ಟ ಪೊಲೀಸರ ವರದಿಗೆ ಸಂಬಂಧಿಸಿದಂತೆ ಈತ ನಿರ್ಧರಿಸಬೇಕಾಗಿರುತ್ತದೆ.ಆದರೆ ಒಮ್ಮೆ ಮ್ಯಾಜಿಸ್ಟ್ರೇಟರನು ಅಪರಾಧಗಳನ್ನು ಸಂಜ್ಞೆಯಕ್ಕೆ ತೆಗೆದುಕೊಂಡು, ದಂಡ ಪ್ರಕ್ರಿಯಾ ಸಂಹಿತೆಯ 200 ಅಥವಾ 202ನೇ ಪ್ರಕರಣದಲ್ಲಿನ ಸ್ಥಾಪಿತ ಕಾರ್ಯವಿಧಾನವನ್ನು ಆರಂಭಿಸಿದಲ್ಲಿ, ಮತ್ತೆ ಆತ ಸಂಹಿತೆಯ 156(3)ನೇ ಪ್ರಕರಣದ ಲಭ್ಯತೆಗೆ ಹಾಗೂ ಪೂರ್ವ-ಸಂಜ್ಞೆಯ ಹಂತಕ್ಕೆ ಹಿಂತಿರುಗಿಸಲು ಸಕ್ಷಮನಾಗಿರುವುದಿಲ್ಲ.

17. ಪ್ರಸ್ತುತ ಪ್ರಕರಣದಲ್ಲಿ, ಮೊಟ್ಟ ಮೊದಲನೆಯದಾಗಿ, ಮಾನ್ಯ ಮ್ಯಾಜಿಸ್ಟ್ರೇಟರು ದೂರನ್ನು ಖಾಸಗಿ ದೂರಿನಂತೆ ನೋಂದಣಿ ಮಾಡಿಕೊಳ್ಳಲು ನಿರ್ದೇಶಿಸಿರುತ್ತಾರೆ.ಇದರ ಪರಿಣಾಮವಾಗಿ, ಮ್ಯಾಜಿಸ್ಟ್ರೇಟರನ್ನು ದಂಡ ಪ್ರಕ್ರಿಯಾ ಸಂಹಿತೆಯ 200 ನೇ ಪ್ರಕರಣದಡಿಯಲ್ಲಿ ಅಥವಾ 202ನೇ ಪ್ರಕರಣದಡಿಯಲ್ಲಿನ ಪ್ರಕ್ರಿಯೆಯನ್ನು ಅನುಸರಿಸಲು ಅಗತ್ಯಪಡಿಸಲಾಗಿರುತ್ತದೆ.ದಂಡ ಪ್ರಕ್ರಿಯಾ ಸಂಹಿತೆಯ 202 ನೇ ಪ್ರಕರಣವನ್ನು ಮ್ಯಾಜಿಸ್ಟ್ರೇಟರು ಆಶ್ರಯಿಸಿರುವುದರಿಂದ ಮೇಲೆ ಪರಂತುಕದ ಹಿನ್ನಲೆಯಲ್ಲಿ ಮಾನ್ಯ ಮ್ಯಾಜಿಸ್ಟ್ರೇಟರು, 200ನೇ ಪ್ರಕರಣದಡಿಯಲ್ಲಿ ಪ್ರಮಾಣವಚನದ ಮೇಲೆ ಹಾಜರಾದ ದೂರುದಾರ ಹಾಗೂ ಸಾಕ್ಷೀದಾರ (ಯಾರಾದರು ಇದ್ದಲ್ಲಿ) ರನ್ನು ಪರೀಕ್ಷಿಸದ ಹೊರತು ತನಿಖೆಗೆ ಸಂಬಂಧಿಸಿದಂತೆ ನಿರ್ದೇಶನವನ್ನು ಹೊರಡಿಸಿರುವಂತಿರುವುದಿಲ್ಲ.ಈ ಪರಂತುಕವು ಆಜ್ಞಾಪಕ ನಿಬಂಧನೆಗಳಲ್ಲಿಯೂ ರೂಪಿಸಲ್ಪಟ್ಟಿದೆ." ತಕ್ಕದ್ದು " ಪದ ಬಳಕೆಯ ಮೂಲಕ, 200 ನೇ ಪ್ರಕರಣದಡಿಯಲ್ಲಿ ಯಾವುದಾದರು ಇದ್ದಲ್ಲಿ, ಸ್ವತಃ ಹಾಗೂ ಹಾಜರಿರುವ ಸಾಕ್ಷೀದಾರರು ಪ್ರಮಾಣವಚನದ ಮೇಲೆ ಪರೀಕ್ಷಿಸಲು ದೂರಿನ ಮೇಲೆ ಕರೆಯಲು ಮ್ಯಾಜಿಸ್ಟ್ರೇಟರ ಮೇಲೆ ಇದು ಒಂದು ಹೊಣೆಗಾರಿಕೆಯನ್ನೇ ವಿಧಿಸಿರುತ್ತದೆ.ಈ ಕಾರ್ಯವಿಧಾನದ ಪಾಲನೆಯು, ದೂರನ್ನು ಖುದ್ದಾಗಿ ಸಲ್ಲಿಸದಿರುವಾಗ ತನ್ನ ಗುರಿಸಾಧಿಸುವ ಅಭಿವಾದಕ ಉದ್ದೇಶವನ್ನು ಹೊಂದಿರುತ್ತದೆ.ಆ ಹಂತದಲ್ಲಿ, ದೂರಿನಲ್ಲಿ ಮಾಡಿರುವ ಆಪಾದನೆಗಳ ವಾಸ್ತವತೆ ಹಾಗೂ ನಿಖರತೆಗಳ ಜೊತೆಗೆ ದೂರುದಾರರನ್ನು ಗುರುತಿಸುವುದು ಮ್ಯಾಜಿಸ್ಟ್ರೇಟರನಿಗೆ ತಿಳಿದು ಬಂದಿರುವುದಿಲ್ಲ.ಒಬ್ಬ ವ್ಯಕ್ತಿ ಕಾಲ್ಪನಿಕ ಹೆಸರಿನಲ್ಲಿ ಸುಳ್ಳು ಹಾಗೂ ಆಧಾರ ರಹಿತ ಆಪಾದನೆಗಳನ್ನು ಮಾಡಿ ಮ್ಯಾಜಿಸ್ಟ್ರೇಟರಿಗೆ ದೂರನ್ನು ಸಲ್ಲಿಸುವ ಮೂಲಕ, ಕಾನೂನಾತ್ಮಕ ಮನವಿ ಮಾಡಿಕೊಂಡಿರುವ ಸಂಭಾವ್ಯತೆಯಿದ್ದು, ಇದನ್ನು ಪರಿಹರಿಸಲು, ದೂರಿನ ನಿಖರತೆಯನ್ನು ವಿಚಾರಿಸದೆ ಹಾಗೂ ದೂರಿನ ಗುರುತಿಸುವಿಕೆಯನ್ನು ಖಚಿತಪಡಿಸಿಕೊಳ್ಳದೆ, ಪೊಲೀಸರಿಗೆ ತನಿಖೆಮಾಡಲು ನಿರ್ದೇಶನ ನೀಡದಿದ್ದಲ್ಲಿ ಹಾಗೂ ದೂರನ್ನು ತನಿಖೆ ಮಾಡಿದ ತರುವಾಯ ಅದು ಸುಳ್ಳೆಂದು ತಿಳಿದುಬಂದಲ್ಲಿ, ತೊಂದರೆಗೊಳಗಾದ ವ್ಯಕ್ತಿಯ ಹಕ್ಕುಗಳಿಗೆ ಹಾಗೂ ಸ್ವಾತಂತ್ರ್ಯಕ್ಕೆ ಬಾಧಕ ಉಂಟಾಗುತ್ತದೆ.ಹಾಗಾಗಿ, ಸಂಹಿತೆಯ 202 ನೇ ಕಾನೂನಾತ್ಮಕ ಯಾಂತ್ರಿಕ ಪ್ರಕರಣದ ಯಾವುದೇ ದುರ್ಬಳಕೆಯ ನಿವಾರಣೆಯ ದೃಷ್ಟಿಯಿಂದ, ಕಾರ್ಯವಿಧಾನವನ್ನು ಆರಂಭಿಸುವ ಮೊದಲು ತನಿಖೆಯನ್ನು ಸ್ವತಃ ಮ್ಯಾಜಿಸ್ಟ್ರೇಟರಾಗಲೀ ಅಥವಾ ತನಿಖೆ ನಡೆಸಲು ಪೊಲೀಸರಿಗಾಗಲೀ ನಿರ್ದೇಶಿಸಬಹುದಾಗಿರುತ್ತದೆ.ಆದ್ದರಿಂದ, 202 ನೇ ಪ್ರಕರಣದ ಉಪಬಂಧವು ಈ ಉದ್ದೇಶವನ್ನು ಸಾಧಿಸಿಕೊಳ್ಳಲು ಉದ್ದೇಶಿಸಿರುತ್ತದೆ.ಇಂಥ ಸಂದರ್ಭಗಳಲ್ಲಿ ದೂರುದಾರನ ಪರೀಕ್ಷೆಯ ಅಪೇಕ್ಷಣೀಯ ಮಾತ್ರವಾಗಿರದೆ, ಕಾನೂನಿನಡಿಯಲ್ಲಿ ಆಜ್ಞಾಪಕ ಅಗತ್ಯತೆಯಾಗಿರುತ್ತದೆ.ಇದಕ್ಕೆ ತಪ್ಪಿದಲ್ಲಿ, ನನ್ನ ಪ್ರಕಾರ, ನ್ಯಾಯಾಲಯದ ಪ್ರಕ್ರಿಯೆಯ ದುರುಪಯೋಗವಾಗಿ, ಇಡೀ ನಡಾವಳಿಗಳನ್ನು ನಿರರ್ಥಕಗೊಳಿಸಿಕೊಳ್ಳುತ್ತದೆ.

18. ಪ್ರಸ್ತುತ ಪ್ರಕರಣದಲ್ಲಿ, ಮಾನ್ಯ ಮ್ಯಾಜಿಸ್ಟ್ರೇಟರ ಕಾರ್ಯವಿಧಾನ ಕಾನೂನುಬಾಹಿರತೆಯಿಂದಾಗಿ, ಎರಡು ಮೂಲಭೂತ ತಪ್ಪುಗಳನ್ನು ಎಸಗಿರುತ್ತಾರೆ.ಮೊದಲನೇಯದಾಗಿ ಸಂಹಿತೆಯ XV ಅಧ್ಯಾಯದಲ್ಲಿನ ಕಾರ್ಯವಿಧಾನವನ್ನು ಆಗ್ರಯಿಸಿ, ಪ್ರಕರಣವನ್ನು ಸಂಸ್ಥೆಯ ಪೂರ್ವಸ್ಥಿತಿಗೆ ತರದೆ, ಸಂಹಿತೆಯ 156 ( 3) ನೇ ಪ್ರಕರಣದಡಿಯಲ್ಲಿ ಪೊಲೀಸರ ಅಧಿಕಾರವ್ಯಾಪ್ತಿಗೆ ಪ್ರಕರಣವನ್ನು ಉಲ್ಲೇಖಿಸುವುದು.ಎರಡನೇಯದಾಗಿ, ಸಹಿತೆಯ 202 ನೇ ಪ್ರಕರಣವನ್ನು ಆಶ್ರಯಿಸಿ, ದೂರುದಾರ ಹಾಗೂ ಸಾಕ್ಷೀದಾರ ಯಾರಾದರೂ ಹಾಜರಿದ್ದು, ಅವರನ್ನು ಪರೀಕ್ಷಿಸದೆ ಪೊಲೀಸರಿಂದ ತನಿಖೆ ಮಾಡಲು ನಿರ್ದೇಶಿಸದಿರುವುದಾಗಿರುತ್ತದೆ.ಹಾಗಾಗಿ, ಪ್ರಶ್ನಿತ ಆದೇಶ ಹಾಗೂ ತತ್ಪರಿಣಾಮದ ಪ್ರಥಮ ಮಾಹಿತಿ ವರದಿ ಹಾಗೂ ಸಂಹಿತೆಯ 202 ನೇ ಪ್ರಕರಣಕ್ಕೆ ವಿರೋಧವಾಗಿರುವಂಥ ಪ್ರತ್ಯರ್ಜಿದಾರ-ಪೊಲೀಸರು ಕೈಗೊಂಡ ತನಿಖೆ ಎಲ್ಲವೂ ರದ್ದುಪಡಿಸಲು ತಕ್ಕದಾಗಿರುತ್ತವೆ.

ತದನುಸಾರವಾಗಿ, ಅರ್ಜಿಯನ್ನು ಅಂಗೀಕರಿಸಲಾಗಿರುತ್ತದೆ.ಪ್ರತ್ಯರ್ಜಿದಾರ ಪೊಲೀಸರು ತನಿಖೆ ಮಾಡಲು ನಿರ್ದೇಶಿಸಿ ಮಾನ್ಯ ಮ್ಯಾಜಿಸ್ಟ್ರೇಟರು ಹೊರಡಿಸಿದದಿನಾಂಕ: 13-07-2012 ಆದೇಶ ಹಾಗೂ ಅಪರಾಧ ಸಂಖ್ಯೆ 86/2012 ರಲ್ಲಿ ಪ್ರಥಮ ಮಾಹಿತಿ ವರದಿಯು ನೋಂದಣಿ ಹಾಗೂ ಅದರಿಂದ ಉದ್ಭವಿಸಿದ ತತ್ಪರಿಣಾಮದ ನಡಾವಳಿಗಳನ್ನು ಈ ಮೂಲಕ ರದ್ದುಪಡಿಸಲಾಗಿರುತ್ತದೆ.ಸಂಹಿತೆಯ 202 ನೇ ಪ್ರಕರಣದ ಪರಂತುಕದ ನಿಬಂಧನೆಗಳಲ್ಲಿ ಹಾಜರಿದ್ದ ದೂರುದಾರ ಹಾಗೂ ಸಾಕ್ಷೀದಾರರನ್ನು ಪರೀಕ್ಷಿಸಿದ ಮೇಲಿನ ವಿಷಯದೊಂದಿಗೆ ಮುಂದುವರೆದು ಮಾನ್ಯ ಮ್ಯಾಜಿಸ್ಟ್ರೇಟರಿಗೆ ಪ್ರಕರಣವನ್ನು ಹಿಂದಿರುಗಿಸಿರುತ್ತದೆ.